ಸಾಕ್ಷಿಯನ್ನು ದಿನಾಂಕ: 22.06.2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಆರ್.ಎನ್. ವಕೀಲರಿಂದಃ**

ಮದುವೆಯಾದ 2 ತಿಂಗಳಿನಲ್ಲಿ ಎದುರುದಾರ ನನಗೆ ಹಿಂಸೆ ಕೊಟ್ಟ ವಿಚಾರವನ್ನು ತಕ್ಷಣ ನಾನು ನನ್ನ ತಂದೆ ತಾಯಿಗೆ ತಿಳಿಸಿರುತ್ತೇನೆ. ಎದುರುದಾರ ನನಗೆ ಆಹಾರ ಕೊಡದೇ ಇದ್ದಾಗ ನಾನು ಇಂದಿರಾ ಕ್ಯಾಂಟೀನ್ ನಲ್ಲಿ ಊಟ ಮಾಡಿದ್ದೆ ಎಂದು ಪ್ರಥಮ ಬಾರಿಗೆ ನಾನು ನನ್ನ ತಂದೆ ತಾಯಿಗೆ ತಿಳಿಸಿದ್ದೇನೆ. ಎದುರುದಾರರು ನನಗೆ ತೊಂದರೇ ಕೊಟ್ಟಾಗ ಮತ್ತು ನಾನು ಗರ್ಭಿಣಿಯಾಗಿದ್ದಾಗ ನಾನು ಒಬ್ಬಳೇ ಆಸ್ಪತ್ರೆಗೆ ಹೋಗಿರುತ್ತೇನೆ. ಮೊದಲು ನನ್ನನ್ನು ನನ್ನ ಗಂಡ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಹುಟ್ಟುವ ಮಗು ಗಂಡೋ ಅಥವಾ ಹೆಣ್ಣೋ ಎನ್ನುವ ಬಗ್ಗೆ ಪರೀಕ್ಷೆ ಮಾಡಿಸಿದ ಬಗ್ಗೆ ನನ್ನ ಹತ್ತಿರ ದಾಖಲೆ ಇಲ್ಲ. ಸಾಕ್ಷಿ ಮುಂದುವರಿದು ಎದುರುದಾರರೇ ಪರೀಕ್ಷೆ ಮಾಡಿಸಿದ ಕಾರಣ ನಾನು ದಾಖಲೆ ಪಡೆದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣ ದಾಖಲಿಸಿದ ಮೇಲೆ ಆ ಬಗ್ಗೆ ದಾಖಲೆ ಪಡೆಯಲು ನಾನು ಪ್ರಯತ್ನ ಪಟ್ಟಿರುವುದಿಲ್ಲ. ನಾನು ಆ ಬಗ್ಗೆ ವೈದ್ಯರ ಹತ್ತಿರ ಹೋಗಿ ವಿಚಾರಿಸಿರುವುದಿಲ್ಲ. ತೊಂದರೆ ಕೊಡಲು ಪ್ರಾರಂಭಿಸಿದ್ದಾಗಿನಿಂದ ಎಷ್ಟು ಸಮಯ ನಾನು ಎದುರುದಾರರ ಮನೆಯಲ್ಲಿ ಇದ್ದೆ ಎಂದು ಹೇಳಲು ಆಗುವುದಿಲ್ಲ. ಎದುರುದಾರರು ತೊಂದರೆ ಕೊಡುತ್ತಿದ್ದಾರೆಂದು ನಾನು ಪೋಲಿಸರಿಗೆ ದೂರು ಕೊಡಲು ನನಗೆ ತೊಂದರೆ ಇರಲಿಲ್ಲ. ಎದುರುದಾರರ ಸಹೋದರಿಯರು ನನಗೆ ಊಟವನ್ನು ಕೊಡುತ್ತಿರಲಿಲ್ಲ. ಈ ವಿಚಾರವನ್ನು ನನ್ನ ಅರ್ಜಿಯಲ್ಲಿ ಮತ್ತು ನೋಟಿಸನಲ್ಲಿ ತಿಳಿಸಿರುತ್ತೇನೆ.

ನಾಮಕರಣದ ವಿಚಾರವನ್ನು ನಾನೇ ಎದುರುದಾರರಿಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತೇನೆ. ಸದ್ರಿ ಮಗು ತನಗೆ ಹುಟ್ಟಿದ್ದು ಅಲ್ಲ ಎಂದು ಕಾರವಾರದ ಡಿಸ್ಟ್ರಿಕ್ಟ್ ಚರ್ಚ್ ಹೆಡ್‌ರವರಿಗೆ ಎದುರುದಾರರ ತಿಳಿಸಿದ್ದು ಸದ್ರಿ ದಾಖಲೆಯ ಪ್ರತಿಯನ್ನು ಅವರು ನನಗೆ ಕಳುಹಿಸಿದ್ದರು. ಸದ್ರಿ ಅರ್ಜಿ ಈಗ ನನ್ನ ಹತ್ತಿರ ಇದೆ. ಅದನ್ನು ಹಾಜರುಪಡಿಸುತ್ತೇನೆ. ಕಾರವಾರ ಡೈಕೊಸಿಸ್‌ನವರು ನನಗೆ ನೋಟಿಸ ಮಾಡಿ ಇಬ್ಬರನ್ನೂ ಕರೆದಿದ್ದರು. ಅವರು ನಮ್ಮಿಬ್ಬರಿಗೂ ಜಗಳ ಮಾಡಬೇಡಿ ಹೊಂದಿಕೊಂಡು ಹೋಗಿ ಎಂದು ಹೇಳಿದ್ದರು. ಆದರೆ ಆ ಬಗ್ಗೆ ಕಾರವಾರ ಡೈಕೋಸಿಸ್‌ನವರು ಬರವಣಿಗೆಯ ಮೂಲಕ ತಿಳಿಸಿರುವುದಿಲ್ಲ. ಎದುರುದಾರರು ಡೈಕೊಸಿಸ್ ರವರಿಗೆ ನೀಡಿದ ಪತ್ರದಲ್ಲಿಯೇ ವಿಚ್ಛೇದನ ಬೇಕು ಎಂದು ಬರೆದಿದ್ದರು. ಎದುರುದಾರರು ಸದ್ರಿ ಡೈಕೊಸಿಸ್ ರವರ ಎದುರಿಗೆ ತಮ್ಮ ಡಿ.ಎನ್.ಎ ಪರೀಕ್ಷೆಯನ್ನು ಮಾಡಿಸಬೇಕು ಎಂದು ಹೇಳಿರುತ್ತಾರೆ. ಆಗ ನಾನೂ ಕೂಡ ಡಿ.ಎನ್.ಎ. ಪರೀಕ್ಷೆಗೆ ತಯಾರಿದ್ದೇನೆ ಎಂದು ಹೇಳಿರುತ್ತೇನೆ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.